**ಕರ್ನಾಟಕ ರಾಜ್ಯ**
**ಮಾನವ ಹಕ್ಕುಗಳ ಆಯೋಗದ ಧ್ಯೇಯೋದ್ದೇಶಗಳು**

- ಹಕ್ಕುಗಳ ಉಲ್ಲಂಘನೆ ಆಗುವುದನ್ನು ತಡೆಯುವುದು
- ಹಕ್ಕುಗಳ ಉಲ್ಲಂಘನೆ ಆಗದಂತೆ ರಕ್ಷಣೆ ನೀಡುವುದು
- ಹಕ್ಕುಗಳ ಉಲ್ಲಂಘನೆಗೆ ಒಳಗೊಂಡವರಿಗೆ ನೆರವು ನೀಡುವುದು

ಭಾರತ ಸಂವಿಧಾನದಿಂದ ಖಾತರಿಪಡಿಸಲಾಗಿರುವ ಅಥವಾ ಅಂತರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಸೇರಿಸಲಾಗಿರುವ ಮತ್ತು ಭಾರತದಲ್ಲಿ ಜಾರಿಗೊಳಿಸಬಹುದಾದ "ಜೀವನದ, ಸ್ವಾತಂತ್ರ್ಯದ, ಸಮಾನತೆ ಮತ್ತು ವ್ಯಕ್ತಿಯ ಘನತೆಯ ಹಕ್ಕುಗಳೇ ಮಾನವ ಹಕ್ಕುಗಳು."

"ಎಲ್ಲಾ ಮಾನವ ಜೀವಿಗಳು ಹುಟ್ಟಿನಿಂದ ಘನತೆ ಮತ್ತು ಹಕ್ಕುಗಳಲ್ಲಿ ಸಮಾನ ಮತ್ತು ಪ್ರತಿಯೊಬ್ಬನಿಗೂ ಯಾವುದೇ ತರಹದ ತಾರತಮ್ಯ ಇಲ್ಲದ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಹೊಂದುವ ಕಾನೂನುವುಳ್ಳವನಾಗಿದ್ದಾನೆ."

**ಪ್ರತಿಯೊಬ್ಬ ಮಾನವನಿಗೆ ನೈಸರ್ಗಿಕವಾಗಿ ಬಂದಂತಹ ಮತ್ತು ಪರಭಾರೆಯಾಗದಂತಹ ಹಕ್ಕುಗಳು:**

- ಜೀವಿಸುವ ಹಕ್ಕು
- ಮಾನವ ಘನತೆ ಹಕ್ಕು
- ಸಮಾನತೆಯ ಹಕ್ಕು
- ವೈಯಕ್ತಿಕ ಸ್ವಾತಂತ್ರ್ಯ ಹಕ್ಕು
- ಶೋಷಣೆಯ ವಿರುದ್ದ ಹಕ್ಕು
- ಗುಲಾಮಗಿರಿ ವಿರುದ್ದ ಹಕ್ಕು
- ಏಕಾಂತ ಗೌಪ್ಯ ಹಕ್ಕು
- ಪ್ರಾಮಾಣಿಕ ವಿಚಾರಣೆ ಹಕ್ಕು
- ಕಾರ್ಯೋತ್ತರ ಅಪರಾಧಿಕ ಕಾನೂನು ವಿರುದ್ದದ ಹಕ್ಕು
- ಸ್ವ ಅಪರಾಧೀಕರಣದ ವಿರುದ್ದ ಹಕ್ಕು
- ಆರೋಗ್ಯ ಹಕ್ಕು
- ಧರ್ಮದ ಸ್ವಾತಂತ್ರ್ಯ ಹಕ್ಕು
- ಅಭಿವ್ಯಕ್ತಿ ಸ್ವಾತಂತ್ರ್ಯ
- ಸಭೆ ಸೇರುವ ಹಕ್ಕು
- ಸಂಚರಿಸುವ ಮತ್ತು ವಾಸಿಸುವ ಹಕ್ಕು

- ಶಿಕ್ಷಣದ ಹಕ್ಕು
- ಉಪಜೀವನದ ಹಕ್ಕು
- ಪರಿಣಾಮಕಾರಿ ಪರಿಹಾರ ದೊರಕಿಸಿಕೊಳ್ಳುವ ಹಕ್ಕು
- ಕಾನೂನಿನ ಮುಂದೆ ವ್ಯಕ್ತಿ ಗುರುತಿಸಿಕೊಳ್ಳುವ ಹಕ್ಕು
- ಪ್ರಾಣ ರಕ್ಷಣೆಯ ಹಕ್ಕು
- ನ್ಯಾಯ ದೊರಕಿಸಿಕೊಳ್ಳುವ ಹಕ್ಕು
- ಸಾರ್ವಜನಿಕ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವ ಹಕ್ಕು
- ಅನ್ಯಾಯಕ್ಕೆ ಒಳಗಾದವರಿಗೆ ಪರಿಹಾರ ಧನದ ಹಕ್ಕು ಹಾಗೂ
- ಯೋಗ್ಯ ಪರಿಸರದ ಹಕ್ಕು.

ಇವು ಮಾನವನಿಗೆ ಲಭ್ಯವಿರುವ ಮುಖ್ಯವಾದ ಮೂಲಭೂತ ಹಕ್ಕುಗಳು

ಮಾನವ ಹಕ್ಕುಗಳ ಆಯೋಗವು,

- ಸ್ವಪ್ರೇರಣೆಯಿಂದ ಅಥವಾ ಮಾನವ ಹಕ್ಕುಗಳ ಉಲ್ಲಂಘನೆಗೆ, ಗುರಿಯಾದ ವ್ಯಕ್ತಿಯಿಂದ ಅಥವಾ ಅವನ ಪರವಾಗಿ ಬೇರೆ ಯಾರಾದರೂ ಕೊಟ್ಟ ಅರ್ಜಿಯ ಮೇರೆಗೆ;
- ಮಾನವ ಹಕ್ಕುಗಳ ಉಲ್ಲಂಘನೆ ಅಥವಾ ಅವುಗಳಿಗೆ ದುಷ್ಪ್ರೇರಣೆ ನೀಡಿದಲ್ಲಿ;
- ಅಂತಹ ಉಲ್ಲಂಘನೆ ಆಗುವುದನ್ನು ತಡೆಗಟ್ಟುವಲ್ಲಿ ಸಾರ್ವಜನಿಕ ಸೇವಕರು ನಿರ್ಲಕ್ಷ್ಯ ವಹಿಸಿದ್ದಲ್ಲಿ;

ಸೂಕ್ತ ವಿಚಾರಣೆ ಮಾಡಿ ರಕ್ಷಣೆ ಮತ್ತು ನೆರವು ನೀಡುತ್ತದೆ.

ರಾಜ್ಯ ಮಾನವ ಹಕ್ಕುಗಳ ಆಯೋಗವು ರೂಪಿಸಿರುವ ನಿಯಮಾವಳಿಗಳ ಅನ್ವಯ;

- ಅಸಂಬದ್ಧವಾದ, ಅಸ್ಪಷ್ಟ, ಅನಾಮಧೇಯ, ಗುಪ್ತನಾಮದ ಕಾನೂನು ಬಾಹಿರ, ಕ್ಷುಲ್ಲಕವಾಗಿರುವಂತಹ;
- ಬೇರೆ ಆಯೋಗದ ಮುಂದೆ ವಿಷಯವು ಕಾನೂನಿನ್ವಯ ವಿಚಾರಣೆಗೆ ಇದ್ದಲ್ಲಿ;
- ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಘಟನೆಯು ನಡೆದ ಒಂದು ವರ್ಷಗಳ ನಂತರ ಆಪಾದನೆ ಮಾಡಿದಲ್ಲಿ;
- ದಿವಾನೀ ವ್ಯಾಜ್ಯಗಳಿಗೆ, ಸ್ಥಿರಾಸ್ತಿಯ ಹಕ್ಕು ಅಥವಾ ಗುತ್ತಿಗೆ ಜವಾಬ್ದಾರಿಕೆಗೆ ಸಂಬಂಧಪಟ್ಟವುಗಳಿದ್ದಲ್ಲಿ,
- ಸೇವಾ ವಿಷಯಕ್ಕೆ ಅಥವಾ ಔದ್ಯೋಗಿಕ ವಿವಾದಗಳಿದ್ದಲ್ಲಿ,
- ಆಪಾದನೆಯು ಸಾರ್ವಜನಿಕ ಸೇವಕರ ವಿರುದ್ಧ ಇರದಿದ್ದಲ್ಲಿ,
- ಅಲ್ಲದೇ ಖಚಿತವಾಗಿ ಮಾನವ ಹಕ್ಕುಗಳ ಉಲ್ಲಂಘನೆ ಆಗಿದೆಯೆಂದು ಹೇಳದಂತಹ ಆಪಾದನೆಯಾದಲ್ಲಿ,

- ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರದ ಮುಂದೆ ಇರುವಂತಹ ವಿಷಯಕ್ಕೆ ಸಂಬಂಧಪಟ್ಟಿದ್ದಲ್ಲಿ,
- ನ್ಯಾಯಾಲಯದ ಅಥವಾ ಆಯೋಗದ ತೀರ್ಪಿಗೆ ಒಳಪಟ್ಟಿದ್ದಲ್ಲಿ
- ಬೇರೆ ಯಾವುದೇ ಅಧಿಕಾರಿಗಳಿಗೆ ದೂರನ್ನು ಸಲ್ಲಿಸಿ ಅದರ ನಕಲನ್ನು ಸಲ್ಲಿಸಿದ್ದಲ್ಲಿ ಹಾಗೂ
- ಆಯೋಗದ ವ್ಯಾಪ್ತಿಗೆ ಬರದಂತಹ ವಿಷಯಕ್ಕೆ ಸಂಬಂಧಪಟ್ಟಿದ್ದಲ್ಲಿ,

ಮಾನವ ಹಕ್ಕುಗಳ ಆಯೋಗವು ಯಾವುದೇ ಕ್ರಮ ಕೈಗೊಳ್ಳುವುದಿಲ್ಲ.

**ಸಾಮಾನ್ಯವಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗುವ ಸಂದರ್ಭಗಳು;**

- ವಿಚಾರಣಾಧೀನ ಸಾವು
- ಪೊಲೀಸರಿಂದ ಚಿತ್ರಹಿಂಸೆ, ಕಾನೂನು ಬಾಹಿರ ಬಂಧನ, ದಸ್ತಗಿರಿ, ಪೊಲೀಸರು ಅನಾವಶ್ಯಕವಾಗಿ ಪ್ರಕರಣದಲ್ಲಿ ಸಿಲುಕಿಸುವುದು,
- ನಕಲಿ ಪೊಲೀಸ್ ಕಾರ್ಯಾಚರಣೆ,
- ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ,
- ದಲಿತರು ಮತ್ತು ಹಿಂದುಳಿದ ವರ್ಗದವರಿಗೆ, ಅಂಗವಿಕಲರ ಮೇಲೆ ನಡೆಯುವ ದೌರ್ಜನ್ಯ,
- ಜೀತದಾಳು,
- ಮಾನವನಿಂದ ನಿರ್ಮಲೀಕರಣ,
- ಕಾನೂನು ಬಾಹಿರವಾಗಿ ಮಾನವ ಅಂಗಗಳ ವ್ಯವಹಾರ,
- ಭಯೋತ್ಪಾದನೆ,
- ನಕ್ಸಲ್ ಕಾರ್ಯ ಚಟುವಟಿಕೆಗಳು,
- ಬಾಲ್ಯ ವಿವಾಹ,
- ಬಾಲ ಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳು,
- ಮಹಿಳೆ ಮತ್ತು ಮಕ್ಕಳ ಮೇಲೆ ಲೈಂಗಿಕ ಕಿರುಕುಳ,
- ಎಚ್ ಐ ವಿ ಬಾಧಿತರಿಗೆ ಬೇಧಭಾವ ಮಾಡುವುದು,
- ಜನಾಂಗೀಯ ನಿಂದನೆ ಮತ್ತು
- ಅಪಾಯಕಾರಿ ಪರಿಸರ

ಮುಂತಾದವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುವ ಸಂಭವವಿರುತ್ತದೆ.

"ಸರ್ವರಿಗೂ ಸಮಪಾಲು-ಸರ್ವರಿಗೂ ಸಹಬಾಳು" ಇದು ಕವಿ ಕುವೆಂಪು ಅವರ ವಾಣಿಯಾದಲ್ಲಿ "ಸರ್ವರಿಗೂ ಮಾನವ ಹಕ್ಕುಗಳ ಸಂರಕ್ಷಣೆ" ಇದು ಮಾನವ ಹಕ್ಕುಗಳ ಆಯೋಗದ ಘೋಷಣೆಯಾಗಿರುತ್ತದೆ.

ಯಾವುದೇ ರೀತಿಯ ಮಾನವ ಹಕ್ಕುಗಳ ಉಲ್ಲಂಘನೆ ವಿಷಯದಲ್ಲಿ
ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು
ಹಕ್ಕುಗಳ ಉಲ್ಲಂಘನೆ ಆಗದಂತೆ ರಕ್ಷಣೆ ನೀಡಲು ಮತ್ತು
ಹಕ್ಕುಗಳ ಉಲ್ಲಂಘನೆಗೆ ಒಳಗೊಂಡವರಿಗೆ ನೆರವು ನೀಡಲು

**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ**
೪ನೇ ಮಹಡಿ, ೫ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-೫೬೦ ೦೦೧
ದೂರವಾಣಿ: ೦೮೦-೨೨೩೯೨೨೦೦, ಫ್ಯಾಕ್ಸ್: ೦೮೦-೨೨೩೯೨೨೦೭
ಇಲ್ಲಿ ಸಂಪರ್ಕಿಸುವುದು